**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ, ಚಳ್ಳಕೆರೆ**

**ಸಿ.ಸಿ. ನಂ.63/2025**

ದಿನಾಂಕ:14-05-2026.

| | | |
|---|---|---|
| ಹೆಸರು | ಗಾಯತ್ರಮ್ಮ | ಸಿಡಬ್ಲ್ಯೂ- 7 |
| ಗಂಡನ ಹೆಸರು | ಮಂಜುನಾಥ | ಪಿ ಡಬ್ಲ್ಯೂ- 2 |
| ವಯಸ್ಸು | ಸು. 46 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಹೊನ್ನುರು | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದ:**

ಚಾಸಾ-1 ನನ್ನ ಮಗ, ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸಹ ಸಂಬಂಧಿಕರಾಗಬೇಕು. ಆರೋಪಿತರು ಎಂದಿಗೂ ನನಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ, ಕೈಕಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ. ಯಾವುದೇ ವಸ್ತುವಿನಿಂದ ಯಾವುದೇ ಹಲ್ಲೆ ಮಾಡಿರುವುದಿಲ್ಲ. ನಮಗೆ ಪ್ರಾಣದ ಬೆದರಿಕೆ ಹಾಕಿರುವುದಿಲ್ಲ. ಆರೋಪಿತರು ನನ್ನ ಸೀರೆಯನ್ನು ಹಿಡಿದು ಎಳೆದಾಡಿರುವುದಿಲ್ಲ. ಹಲ್ಲೆ ಕುರಿತು ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟು ಗುರುತನ್ನು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಪಿ:2 ಅಂತಾ ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ:2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದ:**

ದಿ:14-12-2023 ರಂದು ನಾನು ಮತ್ತು ಚಾಸಾ-1 ರವರು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಹಳೆಯ ದ್ವೇಷ ಇಟ್ಟುಕೊಂಡು ಬಂದು ನನಗೂ ಮತ್ತು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಕಟ್ಟಿಗೆ ಮತ್ತು ಕಲ್ಲಿನಿಂದ ಚಾಸಾ-1 ರವರಿಗೆ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿಡಿಸಲು ಬಂದ

ನನ್ನ ಎದೆಗೆ ಕೈ ಹಾಕಿ ಸೀರೆಯನ್ನು ಹಿಡಿದು ಎಳೆದಾಡಿ ನನ್ನ ಮಾನಕ್ಕೆ ಚ್ಯುತಿ ಉಂಟು ಮಾಡಿರುತ್ತಾರೆ



ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿತರು ನನಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿತರು ನಮಗೆ ಪ್ರಾಣದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿದ್ದರಿಂದ ಚಾಸಾ-1 ರವರಿಗೆ ಸಾಧಾರಣದ ಸ್ವರೂಪದ ಗಾಯಗಳಾಗಿರುತ್ತವೆ ಮತ್ತು ನನಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ.

ದಿಃ24-12-2023 ರಂದು ಪೊಲೀಸ ಠಾಣೆಯಲ್ಲಿ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ನಾನು ನೀಡಿದ ಸೀರೆಯನ್ನು ಅಮಾನತ್ತು ಪಡಿಸಿಕೊಂಡು ಸಂಜೆ 4-00 ರಿಂದ 4-50 ರವರೆಗೆ ನಿಪಿಃ2 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ17-01-2024 ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ2 ಮತ್ತು ನಿಪಿಃ3 ರ ರ ಕುರಿತು ಸಂಪೂರ್ಣ ಮಾಹಿತಿ ಇದ್ದರೂ ಕೂಡ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಗೂ ಆರೋಪಿತರು ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಈಗ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ ಪಿ ಎಂ., ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದ ಕಾರಣ ಸದರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ, ಚಳ್ಳಕೆರೆ**

**ಸಿ.ಸಿ. ನಂ.63/2025**

ದಿನಾಂಕ:14-05-2026.

| | | |
|---|---|---|
| ಹೆಸರು | ಮಾರುತಿ | ಸಿಡಬ್ಲ್ಯೂ- 1 |
| ತಂದೆಯ ಹೆಸರು | ಮಂಜುನಾಥ | ಪಿ ಡಬ್ಲ್ಯೂ- 1 |
| ವಯಸ್ಸು | ಸು. 24 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಹೊನ್ನುರು | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದ:**

ಚಾಸಾ-7 ನನ್ನ ತಾಯಿ, ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸಹ ಸಂಬಂಧಿಕರಾಗಬೇಕು. ಆರೋಪಿತರು ಎಂದಿಗೂ ನನಗೆ ಮತ್ತು ಚಾಸಾ-7 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ, ಕೈಕಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ. ಯಾವುದೇ ವಸ್ತುವಿನಿಂದ ಯಾವುದೇ ಹಲ್ಲೆ ಮಾಡಿರುವುದಿಲ್ಲ. ನನಗೆ ಪ್ರಾಣದ ಬೆದರಿಕೆ ಹಾಕಿರುವುದಿಲ್ಲ. ಚಾಸಾ-7 ರವರ ಸೀರೆಯನ್ನು ಹಿಡಿದು ಎಳೆದಾಡಿರುವುದಿಲ್ಲ. ಹಲ್ಲೆ ಕುರಿತು ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ದೂರನ್ನು ನೀಡಿಲ್ಲ.

ಸಾಕ್ಷಿಗೆ ಹೇಳಿಕೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆ ದೂರನ್ನು ನಿಪಿ:1 ಅಂತ, ಸಾಕ್ಷಿಯ ಸಹಿಯನ್ನು ನಿಪಿ:1(ಎ) ಅಂತ ಗುರುತಿಸಲಾಯಿತು. ನಿಪಿ:1 ರಲ್ಲಿ ಏನು ಬರೆದಿರುತ್ತದೆ ಅಂತ ನನಗೆ ಗೊತ್ತಿಲ್ಲ. ನಿಪಿ:1 ಕ್ಕೆ ನಾನು ಸುಮಾರು 1 ವರ್ಷದ ಹಿಂದೆ ನಾಯಕನಹಟ್ಟಿ ಪೊಲೀಸ್ ಠಾಣೆಯಲ್ಲಿ ನಮ್ಮ ಮತ್ತು ಆರೋಪಿತರ ಮಧ್ಯೆ ಇದ್ದ ಭಿನ್ನಾಭಿಪ್ರಾಯವನ್ನು ತಿಳಿಸಲು ಹೋದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದ:**

ದಿ:14-12-2023 ರಂದು ನಾನು ಮತ್ತು ಚಾಸಾ-7 ರವರು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಹಳೆಯ ದ್ವೇಷ ಇಟ್ಟುಕೊಂಡು ಬಂದು ನನಗೂ ಮತ್ತು ಚಾಸಾ-7 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಕಟ್ಟಿಗೆ ಮತ್ತು ಕಲ್ಲಿನಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿಡಿಸಲು ಬಂದು ಚಾಸಾ-7 ರವರ

ಎದೆಗೆ ಕೈ ಹಾಕಿ ಸೀರೆಯನ್ನು ಹಿಡಿದು ಎಳೆದಾಡಿ ಚಾಸಾ–7 ರವರ ಮಾನಕ್ಕೆ ಚ್ಯುತಿ ಉಂಟು



ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿತರು ಚಾಸಾ–7 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿತರು ನಮಗೆ ಪ್ರಾಣದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿದ್ದರಿಂದ ನನಗೆ ಸಾಧಾರಣದ ಸ್ವರೂಪದ ಗಾಯಗಳಾಗಿರುತ್ತವೆ ಮತ್ತು ಚಾಸಾ–7 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ.

ಈಗ ಓದಿ ಹೇಳಿದಂತೆ ನಾನು ಪೊಲೀಸರಿಗೆ ನಿಪಿಃ1 ರಂತೆ ಹೇಳಿಕೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ1 ರ ಕುರಿತು ಸಂಪೂರ್ಣ ಮಾಹಿತಿ ಇದ್ದರೂ ಕೂಡ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಗೂ ಆರೋಪಿತರು ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಈಗ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎಂ ಪಿ ಎಂ., ಆರೋಪಿತರ ಪರ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದ ಕಾರಣ ಸದರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.